# ಎನ್‌ಐಪಿಎಂ ಮಂಗಳೂರು: ಕುಲಪತಿಗಳ ಸಮಾವೇಶ



**ಮಹಾನಗರ, ಫೆ. 18:** ದಿ ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಪರ್ಸನಲ್ ಮ್ಯಾನೇಜ್‌ಮೆಂಟ್ (ಎನ್‌ಐಪಿಎಂ) ಮಂಗಳೂರು ಘಟಕದ ವತಿಯಿಂದ ಕುಲಪತಿಗಳ ಸಮಾವೇಶ –2025 ನಗರದ ಖಾಸಗಿ ಹೋಟೇಲ್‌ನಲ್ಲಿ ಇತ್ತೀಚೆಗೆ ನಡೆಯಿತು.

ಸುರತ್ಕಲ್ ಎನ್‌ಐಟಿಕೆ ನಿರ್ದೇಶಕ ಪ್ರೊ। ಬಿ. ರವಿ., ಮಂಗಳೂರು ವಿ.ವಿ. ಕುಲಪತಿ ಪ್ರೊ। ಪಿ.ಎಲ್.ಧರ್ಮ, ನಿಟ್ಟೆ ಡೀಮ್ಡ್ ಟುಬಿ ವಿವಿ ಕುಲಪತಿ ಡಾ। ಎಂ.ಎಸ್. ಮೂಡಿತ್ತಾಯ, ಯೇನೆಪೊಯ ಡೀಮ್ಡ್ ಟು ಬಿ ವಿ.ವಿ. ಕುಲಪತಿ ಡಾ। ಎಂ. ವಿಜಯ್ ಕುಮಾರ್, ಮಾಹೆ ಮಣಿಪಾಲದ ಸಹ ಕುಲಪತಿ ಡಾ। ದಿಲೀಪ್ ನ್ಯಾಕ್, ಸಂತ ಅಲೋಶಿಯಸ್ ಡೀಮ್ಡ್ ಟು ಬಿ ವಿಶ್ವವಿದ್ಯಾಲಯದ ಸಹ ಕುಲಪತಿ ರೆ। ಡಾ। ಮೆಲ್ವಿನ್ ಡಿ'ಕುನ್ಹಎಸ್. ಜೆ., ವಿಟಿಯು ಬೆಳಗಾವಿ ಕುಲಪತಿ ಡಾ। ಎಸ್. ವಿದ್ಯಾಶಂಕರ್ ಭಾಗವಹಿಸಿದ್ದರು.

ಎನ್‌ಐಪಿಎಂ ಕಾರ್ಯಕಾರಿ ಸಮಿತಿ ಸದಸ್ಯೆ ಡಾ। ಆಶಾ ಅಲ್ಬುಕರ್ಕ್ ಪೈ ಅವರು ಎನ್‌ಐಪಿಎಂ ಚಟುವಟಿಕೆಗಳ ಕುರಿತು ಮಾಹಿತಿ ನೀಡಿದರು. ಪ್ರಾಟ್ ವಿಟ್ನಿ ಎಚ್‌ಆರ್ ಹೆಡ್ ಸಂದೀಪ್ ಎಸ್ .ಪಿ., ದಿಕ್ಸೂಚಿ ಭಾಷಣ ಮಾಡಿದರು.

ಫ್ರಾನ್ಸ್‌ನ ಎಕ್ಸೆಲಿಯಾ ಬಿಸ್‌ನೆಸ್ ಸ್ಕೂಲ್‌ನ ಪ್ರಾಧ್ಯಾಪಕ ಡಾ। ಅಮಿತಾಭ್ ಆನಂದ್, ಎಂಆರ್‌ಪಿಎಲ್‌ನ ಜಿಜಿಎಂ ಕೃಷ್ಣ ಹೆಗ್ಡೆ ಎಂ. ಮುಖ್ಯ ಅತಿಥಿಗಳಾಗಿದ್ದರು. ಎನ್‌ಐಪಿಎಂ ಮಾಜಿ ಅಧ್ಯಕ್ಷರಾದ ಡಾ। ದೇಪರಾಜ್ ಕೆ., ಪಿ.ಎ. ಜೋಸ್, ಶೇಖರ್ ಪೂಜಾರಿ, ಪಿ. ಸುರೇಶ್, ಡಾ। ಸೆಬೆಸ್ಟಿಯನ್ ಕೆ.ವಿ. ಭಾಗವಹಿಸಿದ್ದರು.

ಎನ್‌ಐಪಿಎಂ ಚೇರ್ಮನ್ ಸ್ಟೀವನ್ ಪಿಂಟೋ ಸ್ವಾಗತಿಸಿದರು. ಕಾರ್ಯದರ್ಶಿ ಲಕ್ಷ್ಮೀಶ್ ರೈ ವಂದಿಸಿದರು. ಆಲ್ಫೋನ್ಸ್ ಪಾವ್ಲ್, ಶ್ರಾವ್ಯಾ ನಾಯ್ಕ್ ಕಾರ್ಯಕ್ರಮ ನಿರೂಪಿಸಿದರು.

Times of India,Date:19/02/25.p.no.03